ಈಶ್ವರಪ್ಪನವರೂ ಎತ್ತಿದ್ದಾರೆ. ಹೀಗಾಗಿ, ನಾನು ಇಲ್ಲಿ ಹೇಳುವುದೇನೆಂದರೆ, ಇವತ್ತೇನು ತಾವು ಈ ವಿಷಯಗಳನ್ನು ಪ್ರಸ್ತಾಪ ಮಾಡಿದ್ದೀರಿ ಅದರ ಬಗ್ಗೆ ಚರ್ಚೆ ಮಾಡೋಣ.

ಶ್ರೀ ಡಿ.ಕೆ. ಶಿವಕುಮಾರ್: 10–15 ನಿಮಿಷ ಅವಕಾಶ ಕೊಡಿ. ಅವರೂ convince ಮಾಡುತ್ತಾರೆ, ನಾವೂ convince ಮಾಡುತ್ತೇವೆ. ತಾವು ಆಮೇಲೆ ಒಂದು ತೀರ್ಮಾನಕ್ಕೆ ಬನ್ನಿ.

ಅಧ್ಯಕ್ಷರು: Preliminary submission ಗೆ ಇಷ್ಟು ಚರ್ಚೆ ಬೇಆಗಿಲ್ಲ. ಈ ನಿಲುವಳಿ ಸೂಚನೆಯ ವ್ಯಾಪ್ತಿಯೊಳಗೆ ಯಾವುದು ಇರಬೇಕೆನ್ನುವುದಷ್ಟೇ ಇರುವುದು. ಇದರೊಳಗೆ ಎಲ್ಲಾ ವಿಷಯಗಳನ್ನೂ ಪ್ರಸ್ತಾಪಿಸಿ convince ಮಾಡುವುದಲ್ಲ. ನಿಲುವಳಿ ಸೂಚನೆಯಲ್ಲಿ ಈ ವಿಷಯ ಬರುತ್ತದೆಯೋ, ಇಲ್ಲವೋ ಎನ್ನುವುದು ಅಷ್ಟೇ ಇರುವುದು. ಹಾಗಾಗಿ ನಾನು ಇಲ್ಲಿ ರೂಲಿಂಗ್ ಕೊಡುವುದೇನೆಂದರೆ.....

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಮಾನ್ಯ ಅಧ್ಯಕ್ಷರೆ, ನಾನು ಸದನದ ಸಮಯ ಕಳೆಯಬಾರದು ಎಂದು ಬಹಳ ತಾಳ್ಮೆಯಿಂದ ನಿಮ್ಮ ಛೇಂಬರ್‌ಗೆ ಬಂದು ಹೇಳಿ, ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೆ. Question Hour ನಂತರ ತೆಗೆದುಕೊಳ್ಳೋಣವೆಂದು ನೀವು ಹೇಳಿದ್ದರಿಂದ, ಈಗ ನಾನು ಚರ್ಚೆ ಪ್ರಾರಂಭ ಮಾಡಿದ್ದೇನೆ. ನಿಲುವಳಿ ಸೂಚನೆ ಅಡಿಯಲ್ಲಿ ಇದು ಬರುವುದಿಲ್ಲ ಎಂಬ ತಮ್ಮ ಮಾತನ್ನು ನಾನು ಒಪ್ಪಿದರೂ ಕೂಡ, ತಾವು ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಹೇಳಿದ ಮೇಲೆ, point of order ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ. ಆ point of order ಅನ್ನು over rule ಮಾಡಿ ಚರ್ಚಿಸಲು ಅನುಮತಿ ಕೊಟ್ಟಿದ್ದೀರಿ ಎಂದು ನಾವು ಭಾವಿಸಿದ್ದೆವು.....

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ:– ಮಾನ್ಯ ಸ್ಪೀಕರ್‌ರವರು point of order ಬಗ್ಗೆ ತಮ್ಮ ruling ಕೊಡಲಿ.

(ಗೊಂದಲ)

5. ಸಭಾಧ್ಯಕ್ಷರ ತೀರ್ಮ.

ವಿಷಯ: ನಿಲುವಳಿ ಸೂಚನೆಯನ್ನು ತಿರಸ್ಕರಿಸಿ ನಿಯಮ 69ರ ಅಡಿಯಲ್ಲಿ ಚರ್ಚಿಸಲು ಅನುಮತಿ ನೀಡಿರುವ ಬಗ್ಗೆ.

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರ ಸದಸ್ಯರು ನಿಡಿರುವ ನಿಲುವಳಿ ಸೂಚನೆಯನ್ನು ನಾನು ಪರಿಶೀಲಿಸಿರುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಾಸ್ತಾವಿಕವಾಗಿ ವಿಷಯವನ್ನು ಮಂಡಿಸಿರುತ್ತಾರೆ ಹಾಗೂ ಸರ್ಕಾರದ ವತಿಯಿಂದ ಉತ್ತರವನ್ನು ನೀಡಲಾಗಿರುತ್ತದೆ. ನಿಲುವಳಿ ಸೂಚನೆಯಲ್ಲಿ ಕಾನೂನು ಸುವ್ಯವಸ್ಥೆ ಸೇರಿದಂತೆ 3–4 ವಿಷಯಗಳು ಒಳಗೊಂಡಿವೆ. ಕರ್ನಾಟಕ

ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಗಳು ನಿಯಮಾವಳಿಗಳ ನಿಯಮ 62(11)ರಲ್ಲಿ ಒಂದು ನಿಲುವಳಿ ಸೂಚನೆಯಲ್ಲಿ ಒಂದಕ್ಕಿಂತ ಹೆಚ್ಚು ವಿಷಯಗಳನ್ನು ಚರ್ಚಿಸಕೂಡದೆಂದು ಉಲ್ಲೇಖಿಸಲಾಗಿದೆ. ಆದ್ದರಿಂದ ನಿಲುವಳಿ ಸೂಚನೆಯನ್ನು ತಿರಸ್ಕರಿಸಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಕಾನೂನು ಸುವ್ಯವಸ್ಥೆ ವಿಷಯ ಸಾರ್ವಜನಿಕ ಮಹತ್ವದ್ದು ಎಂಬ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಇವತ್ತು ಕಾಂಗ್ರೆಸ್ ಪಕ್ಷದಿಂದ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಜೆ.ಡಿ. (ಎಸ್) ಪಕ್ಷದಿಂದ ಮಾನ್ಯ ಕುಮಾರಸ್ವಾಮಿಯವರು ಮತ್ತು ಇತರ ಶಾಸಕರೇನು ಎರಡು ನಿಲುವಳಿ ಸೂಚನೆಗಳನ್ನು ಕೊಟ್ಟಿದ್ದಾರೆ, ಅವುಗಳನ್ನು ತಿರಸ್ಕಾರ ಮಾಡಿ, ಅವುಗಳನ್ನು ಚರ್ಚೆಗೆ ಅವಕಾಶ ಮಾಡಿಕೊಡುವ ಉದ್ದೇಶದಿಂದ ನಿಯಮ 69ರ ಅಡಿಯಲ್ಲಿ ಚರ್ಚಿಸಲು ನಾನು ಅನುಮತಿಯನ್ನು ನೀಡಿದ್ದೇನೆ. ಚರ್ಚೆಯನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಮುಂದುವರೆಸಬಹುದು.

6. ನಿಯಮ 69ರ ಮೇರೆಗೆ ಅಲ್ಪ ಕಾಲಾವಧಿ ಚರ್ಚೆ

ವಿಷಯ: ರಾಜ್ಯದಲ್ಲಿ ಕುಸಿಯುತ್ತಿರುವ ಕಾನೂನು ಸುವ್ಯವಸ್ಥೆ ಬಗ್ಗೆ.

ಶ್ರೀ ಕೆ.ಎಸ್.ಈಶ್ವರಪ್ಪ:– ಇಡೀ ಸದನದಲ್ಲಿರುವ ಬಹಳಷ್ಟು ಹೊಸ ಶಾಸಕರು ಮಾನ್ಯ ಖರ್ಗೆಯವರ ಮಾತನ್ನು ಕೇಳಬೇಕೆಂದಿದ್ದಾರೆ.

ಶ್ರೀ ಬಸವರಾಜ ಬೊಮ್ಮಾಯಿ:– ಮಾನ್ಯ ಅಧ್ಯಕ್ಷರು ಈ ವಿಷಯವನ್ನು ನಿಯಮ 69ರ ಅಡಿಯಲ್ಲಿ ಚರ್ಚಿಸಲು ಅವಕಾಶ ಮಾಡಿಕೊಟ್ಟಿದರಿಂದ ಇಲ್ಲಿ open debate ಮಾಡಲಿಕ್ಕೆ ಅವಕಾಶ ಸಿಕ್ಕಿದೆ. ನೀವೂ ಹೇಳಬಹುದು, ಈ ಕಡೆ ಸದಸ್ಯರೂ ಸಹ ಚರ್ಚೆಯಲ್ಲಿ ಪಾಲ್ಗೊಳ್ಳಬಹುದು.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ನೀವೂ ಮಾತನಾಡಿ, ಯಾರು ಬೇಡವೆಂದರು? ಯಾರೂ ನಿಮ್ಮ ಕೈಕಟ್ಟಿ ಹಾಕಿಲ್ಲ. ನಿಮ್ಮ ಬಾಯಿಯಂತೂ 24 hours ಖಿಲ್ಲಾನೇ ಇದೆ. ಅದನ್ನು ಖಿಲ್ಲಾನೇ ಇಟ್ಟುಕೊಳ್ಳಿ, ಯಾರು ಬೇಡವೆಂದಿದ್ದಾರೆ?

ಶ್ರೀ ಬಸವರಾಜ ಬೊಮ್ಮಾಯಿ:– ನೀವು ಯಾವಾಗ ಬಾಯಿ ತೆಗೆಯುತ್ತೀರಿ ಯಾವಾಗ ಮುಚ್ಚುತ್ತೀರಿ ಎನ್ನುವುದು ಜನರಿಗೆಲ್ಲಾ ಗೊತ್ತಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಗೊತ್ತಿರುವುದರಿಂದಲೇ ನಾವು ಇಲ್ಲಿದ್ದೇವೆ.

ಶ್ರೀ ಅರವಿಂದ ಲಿಂಬಾವಳಿ:– ಮಾನ್ಯ ಖರ್ಗೆ ಸಾಹೇಬರೆ, ದೆಹಲಿಯ ಸಿಟ್ಟನ್ನು ತಂದು ತಾವು ಬೆಂಗಳೂರಿನಲ್ಲಿ ಏಕೆ ವ್ಯಕ್ತಪಡಿಸುತ್ತಿದ್ದೀರಿ?